ಇವ್ರು ಎಸಿಪಿ ಆದಿತ್ಯವರ್ಮಾ, ಇವ್ರು ಇನ್‌ಸ್ಪೆಕ್ಟರ್ ಸಂತೋಷ ವಾಡಕರ್.' ಎಂದು ತನ್ನ ಜೊತೆಗಿನ ಅಧಿಕಾರಿಗಳನ್ನು ಪರಿಚಯಿಸುತ್ತಾ, 'ಇಷ್ಟು ತಿಂಗಳಿಂದ ಇವ್ರೆಲ್ಲಾ ಇಲಾಖೆಗಳಿಗೆ ಸಿಗಲಾರ್ದ ಆಟ ಆಡತಿದ್ರು. ಇಲ್ಲಿ ಕೊಲೆ ಮಾಡಿ ಉತ್ತರ ಭಾರತಕ್ಕ ಹೋಗಿದ್ರು. ಅಲ್ಲಿ ಉತ್ತರ ಪ್ರದೇಶದಲ್ಲಿ ರೈಲ್ವೆ ಬ್ಲಾಸ್ಟ್ ಆಗಿ ಇಪ್ಪತ್ಮೂರ ಜನ ಸತ್ರಲಾ..ಆ ಪ್ರಕರಣವನ್ನ ಇವ್ರ ಮಾಡಿದ್ದು, ಅಲ್ದನ ಪಂಜಾಬದಾಗ ಒಬ್ಬ ಉಗ್ರಗಾಮಿ ಗಡಿಪಾರ ಆಗಾಕ ಇವ್ರ ಕಾರಣ. ಆ ಎರಡ ಕೇಸಿಗೆ ಸಂಬಂಧಪಟ್ಟಾಂಗ ರೈಲ್ವೆ ಮತ್ತ ಡಿಫೆನ್ಸ್ ಇಲಾಖೆಯ ವಾಂಟೆಡ್ ಲಿಸ್ಟ್‌ನ್ಯಾಗ ಇದ್ದವ್ರು. ಎರಡೂ ಕೇಸಿಗೆ ಸಂಬಂಧಪಟ್ಟಂಗ ಎರಡೂ ಇಲಾಖೆಯ ಅಧಿಕಾರಿಗಳ ಸ್ಪೆಷಲ್ ಇನ್‌ವೆಸ್ಟಿಗೇಶನ್ ಟೀಮ್ ಮಾಡಿದ್ರು. ಆರೋಪಿಗಳೆಲ್ಲಾ ಇಲ್ಲಿಯವ್ರ ಅಂತ ಆ ಟೀಮಿನ್ಯಾಗ ನನ್ನನ್ನೂ ಸೇರಿಸಿದ್ರೂ. ಅಲ್ಲಿಂದನ ನಮ್ಮ ಇನ್‌ವೆಸ್ಟಿಗೇಷನ್ ಶುರು ಆತು. ಅದಕ್ಕಿಂತ ಮದಲ ನನ್ನ ಎದಿಯಾಗ ತಂಗಿ ಕಳಕೊಂಡ ದುಃಖದ ಬೆಂಕಿ ಸುಡುತಿತ್ತ. ಇವ್ರನೆಲ್ಲಾ ಏನ ಮಾಡಲಿ ಅಂತ ರಕ್ತ ಕುದಿತಿತ್ತ. ಆದ್ರ ಕಾನೂನು ನನ್ನ ಕೈ ಕಟ್ಟಿ ಹಾಕಿತ್ತು. ಅದ್ಕ ಸುಮ್ಮನಿದ್ದೆ. ಆದ್ರ ಈ ಟೀಮನ್ಯಾಗ ನನ್ನನ್ನೂ ಇಲಾಖೆಯವರು ಸೇರಿಸಿದಾಗ ಇದು ದೇವರ ನೀಡಿದ ಅವಕಾಶ ಅಂತ ತಿಳಿಕೊಂಡೆ. ಇವ್ರನ್ನೆಲಾ ಹಿಡಿದ ಕೈಗೆ ಬೇಡಿ ಹಾಕಬೇಕಂತ ಛಲ ಮೂಡ್ತು. ಆದ್ರ ಇಂದ ಇವ್ರೆಲ್ಲಾ ತಪ್ಪಿಸಿಕೊಂಡ ಓಡಿ ಹೋಗಿ ನಮ್ಮ ಕೈಯಿಂದನ ಸಾಯಬೇಕಾಯಿತ. ನನ್ನ ಕರ್ತವ್ಯಾನೂ ಮಾಡಿದೆ. ಜೊತಿಗಿ ಇವತ್ತ ಇವರನ್ನೆಲ್ಲಾ ಸುಟ್ಟ ಮ್ಯಾಲ ನನ್ನನ್ನ ಸುಡುತ್ತಿದ್ದ ಉರಿನೂ ಶಾಂತ ಆಯಿತು. ನಿನಗ ಗೊತ್ತಾ ಸುಭಾಷ..? ನೀನು ಎಲ್ಲೆಲ್ಲಿ ಹೋಗಿದ್ಯೋ ಅಲ್ಲೆಲ್ಲಾ ನಾವ ನಿನಗ ಗೊತ್ತ ಇಲ್ದಾಂಗ ನಿನ್ನ ಹಿಂದ ಇದ್ವಿ. ಯಾವಾಗ ನೀನ ಇಲ್ಲಿಗೆ ಚಂದ್ರಶೇಖರನ ಕರಕೊಂಡ ಬರ್ತಿಯಂತ ಗೊತ್ತಾತೋ, ವಿಜಯ ಮತ್ತ ಗೋಪಾಲ ಬರ್ತಾರಂತೂ ಗೊತ್ತಿತ್ತ. ಅದಕ ನಾವು ನಿಮಗಿಂತ ಮೊದಲ ಬಂದ ಅಳ್ಳಿಮರದ ಹತ್ರ ಕಾಯ್ಕೊಂತ ಕುಂತಿದ್ವಿ.'



ಅವರ ಹತ್ತಿರ ಬಂದ ಜಗದೀಶ, 'ಭರತ ಕೊಲೆಗಾರರಿಗೆ ಜೊತಿಗಿ ದೇಶದ್ರೋಹಿಗಳಿಗೆ ಛಲೋ ಶಿಕ್ಷೆ ಆತು. ಇಲ್ಲಂದ್ರ ಇನ್ನೂ ಏನೇನೋ ದೇಶದ್ರೋಹದ ಕೆಲ್ಸಾ ಮಾಡತಿದ್ರ ಆ ಭಗವಂತಗ ಗೊತ್ತ.'

'ಹೌದು ಸರ್. ನೀವು ಕೂಡಾ ಎಷ್ಟ ತಿಂಗಳಿಂದಾ ನನ್ನ ತಂಗಿ ಸಾವಿಗೆ ನ್ಯಾಯ ಕೊಡಿಸಬೇಕಂತ ಹೋರಾಟ ಮಾಡ್ತಾ ಅದಿರಿ ಅನ್ನೂದು ನನಗ ಗೊತ್ತೈತಿ. ಜೊತಿಗಿ ಪ್ರಕಾಶನ ಕೊಂದ ಈ ಇಬ್ರೂ ಸಾಕ್ಷಿ ಸಿಗದಂಗ ಮಾಡಿ ಹೆಂಗ ಹೊರಗ ಅಡ್ಡಾಡಾಕ ಹತ್ತಿದ್ರಂತ ಎಲ್ಲಾರಿಗೂ ಗೊತ್ತೈತಿ. ಶಶಿರೇಖಾ ಕೊಲೆ ಆಗಾಕ ಚಂದ್ರಶೇಖರನಂಗ ಈ ಇಬ್ರೂನು ಕಾರಣ ಅದಾರ. ಶಶಿ ಈ ಗಾರ್ಡನದಾಗ ಕೊಲೆ ಆಗಬೇಕಾದ್ರ ಇವರಿಬ್ರೂ ಇಲ್ಲೇ ಇದ್ದ ಚಂದ್ರಶೇಖರನಿಗೆ ಕೊಲ್ಲಾಕ ಹೇಳಿದವ್ರು. ಅದಕ್ಕ ಕಾನೂನಿಗೆ ಒಪ್ಪಿಸಬೇಕಂದ್ರೂ ತಮ್ಮ ಸಾವ ತಾವ ತಂದಕೊಂಡ್ರು. ಏಕಕಾಲಕ್ಕ ನನ್ನ ಕರ್ತವ್ಯ ಮಾಡಾಕ ಹಂಗ ನನ್ನ ಶಶಿ ಸಾವಿಗೆ ನ್ಯಾಯ ಸಿಗೂವಂಗ ಮಾಡಿದ್ರು. ದೇಶದ ಗಡಿಯಾಗ ನಿಂತ ಮಳಿ ಚಳಿ ಅನ್ನ ವೈರಿಗಳಿಂದ ನಾವು ನಿಮ್ಮನೆಲ್ಲ ರಕ್ಷಣಾ ಮಾಡ್ತಿವಿ. ಆದ್ರ, ಗಡಿ ಒಳಗ ನಮ್ಮವ್ರನ್ನ ರಕ್ಷಣಾ ಮಾಡೂವ್ರ ಯಾರು...?' ಎಂದು ಭಾವುಕತೆಯಿಂದ ತಮ್ಮ ಮಾತನ್ನು ನಿಲ್ಲಿಸಿದಾಗ ನಿಂತ ಜನರೆಲ್ಲಾ ಭರತನ ಮಾತುಗಳನ್ನು ವಿಷಣ್ಣತೆಯಿಂದ ಕೇಳುತ್ತಿದ್ದರು. ಭರತ ಜಗದೀಶನಿಗೆ ನಮಸ್ಕರಿಸುವಷ್ಟರಲ್ಲಿ ಶಶಿರೇಖೆಯ ನೆನಪಾಗಿ ಆತನ ಕಣ್ಣಾಲಿಗಳು ತುಂಬಿ ಬಂದು ಮುಂದೆ ಮಾತನಾಡದೆ ಜೊತೆಯ ಪೊಲೀಸ್ ಅಧಿಕಾರಿಗಳೊಂದಿಗೆ ಹೆಜ್ಜೆ ಹಾಕಿದ.

ಇತ್ತ ಜಗದೀಶ ಪ್ರತಾಪಮೋಹನ್ ಪ್ರತಿಮೆಯ ಮುಖದತ್ತ ದೃಷ್ಟಿ ಬೀರಲು ಆ ಮುಖ ಪ್ರಶಾಂತತೆಯಿಂದ ಮಂದಸ್ಮಿತವಾಗಿರುವಂತೆ ಭಾಸವಾಗುತ್ತಿತ್ತು.

●